

## ಈ ಬೇಸಿಗೆ ಅರಮನೆ ನೋಡಿದ್ದೀರಾ?

ವಿಜಯಪುರ ಜಿಲ್ಲೆಯು ಐತಿಹಾಸಿಕ ಸ್ಥಳಗಳ ನೆಲೆಬೀಡು. ಇಲ್ಲಿ ವಿಶ್ವ ಪ್ರಸಿದ್ಧ ಗೋಲಗುಮ್ಮಟ, ಇಬ್ರಾಹಿಂ ರೋಜಾ, ಬಾರಾ ಕಮಾನು ಸೇರಿದಂತೆ ವಿವಿಧ ಮಹಲ್‌ಗಳು ಹಾಗೂ ಸ್ಮಾರಕಗಳು ಹೆಸರುವಾಸಿಯಾಗಿವೆ. ಆದಿಲ್ ಶಾಹಿ ಅರಸರು ನಿರ್ಮಿಸಿದ ಹಲವು ಸ್ಮಾರಕಗಳಲ್ಲಿ ವಿಜಯಪುರ ಹೊರವಲಯದ ಸಿಂದಗಿ ರಸ್ತೆ ಮಾರ್ಗದಲ್ಲಿ ಸಿಗುವ ಕುಮಟಗಿ ಗ್ರಾಮದ ಬೇಸಿಗೆ ಅರಮನೆಯೂ ಒಂದು ವಿಶೇಷ ರಚನೆಯಾಗಿದ್ದು, ಹಿಂದೂ ಇಸ್ಲಾಮಿಕ್ ಶೈಲಿಯಲ್ಲಿದೆ.

ಆದಿಲ್ ಶಾಹಿ ಅರಸರು ಬೇಸಿಗೆಯ ಉರಿ ಬಿಸಿಲಿನಲ್ಲಿ ತಮ್ಮ ರಾಣಿಯರೊಡನೆ ವಿಹರಿಸಿ ವಿಶ್ರಮಿಸಲು ನಿರ್ಮಿಸಲಾದ ಈ ಬೇಸಿಗೆ ಅರಮನೆಯು ಈಗ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇಲ್ಲಿ ಸುತ್ತಲೂ ನೀರಿನಿಂದ ಆವೃತವಾದ ವಿಶ್ರಾಂತಿ ಗೋಪುರದ ವಾಸ್ತು ವಿನ್ಯಾಸವಿದೆ. ಆಕರ್ಷಕ ಉದ್ಯಾನವಿರುವ ಈ ವಿಶೇಷ ಬೇಸಿಗೆ ಅರಮನೆಯ ಸ್ನಾನಗೃಹದಲ್ಲಿ ಆದಿಲ್ ಶಾಹಿ ಅರಸರೇ ನಿರ್ಮಿಸಿದ ಶವರ್ ಕೂಡ ಇದೆ! ಪಕ್ಕದ ಕೆರೆಯ ನೀರಿನಿಂದ ಹಿಂದಿನ ಕಾಲದಲ್ಲಿಯೇ ವ್ಯವಸ್ಥಿತವಾಗಿ ಜೋಡಿಸಿದ ಹಳೆಯ ಪೈಪ್‌ಲೈನ್ ಮೂಲಕವೇ ಬರುವ ನೀರನ್ನು ಇಲ್ಲಿ ಸಂಗ್ರಹಿಸಲಾಗುತ್ತದೆ. ಸುತ್ತಲೂ ನೀರು ಸಂಗ್ರಹವಾಗುವುದರಿಂದ ಮಧ್ಯದ ವಿಶ್ರಾಂತಿ ಗೃಹ ಹಾಗೂ ಗೋಪುರದಲ್ಲಿನ ವಾತಾವರಣವು ತಂಪಾದ ಗಾಳಿಯೊಡನೆ ಆಹ್ಲಾದಕರವಾಗಿರುತ್ತದೆ. ಈಗಲೂ ಎಷ್ಟೇ ಉರಿಬಿಸಿಲಿದ್ದರೂ ಸಹ ಈ ತಾಣವು ನಿಮ್ಮನ್ನು ತಂಪಾಗಿರಿಸುತ್ತದೆ. ಕನ್ನಡದ ಅದ್ದೂರಿ ಸಿನಿಮಾ ಚಿತ್ರೀಕರಣ ಸೇರಿದಂತೆ ಅನೇಕ ಬಹು ಭಾಷಾ ಸಿನಿಮಾಗಳ ಚಿತ್ರೀಕರಣ ಇಲ್ಲಿ ನಡೆದಿದೆ. ನಿಮ್ಮ ವಿಜಯಪುರ ಪ್ರವಾಸದಲ್ಲಿ ಈ ಬೇಸಿಗೆಯ ಅರಮನೆಯತ್ತ ಒಮ್ಮೆ ಭೇಟಿ ಕೊಡಿ. ಆದಿಲ್ ಶಾಹಿ ಅರಸರ ವೈಜ್ಞಾನಿಕ ಹಾಗೂ ಅತ್ಯದ್ಭುತ ವಾಸ್ತುಶಿಲ್ಪದ ಕೊಡುಗೆ ನಿಮಗೆ ಸ್ಪಷ್ಟವಾಗಿ ಕಾಣುತ್ತದೆ.

—ಶರಣು ಚಟ್ಟಿ, ಗೋಲಗೇರಿ







## ಬಿಲ್ಲುಬಾಣ ಹಿಡಿದ ಸೈನಿಕ!

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಹೋಬಳಿಯ ಕೊಂಡಾಪುರ ಗ್ರಾಮದಲ್ಲಿ ವೀರಗಲ್ಲು ಇದ್ದು ಅದರ ಐತಿಹಾಸಿಕ ಮಹತ್ವವನ್ನು ಹಾಗೂ ಹುತಾತ್ಮ ಸೈನಿಕರ ಸ್ಮರಣೆಯನ್ನು ಗ್ರಾಮದ ಜನರು ಚೆನ್ನಾಗಿ ಮಾಡಿದ್ದಾರೆ. ಇಲ್ಲಿನ ನಿವಾಸಿ ಒಬ್ಬರು ತಮ್ಮ ಮನೆಯ ಹಿತ್ತಲಿನಲ್ಲಿ ದೊರಕಿದ ವೀರಗಲ್ಲನ್ನು ಮನೆಯ ಅಂಗಳದಲ್ಲಿ ಒಂದು ಸುಂದರ ಕಟ್ಟೆ ನಿರ್ಮಿಸಿ, ಸಂರಕ್ಷಣೆ ಮಾಡಿದ್ದಾರೆ. ಅದಕ್ಕೆ ನಿತ್ಯವೂ ಮನೆಮಂದಿ ಹಾಗೂ ಗ್ರಾಮಸ್ಥರು ಬಂದು ಪೂಜಿಸುತ್ತಾರೆ. ಎಲ್ಲಾ ಊರಿನಲ್ಲಿ ವೀರಗಲ್ಲುಗಳನ್ನು ಸಂರಕ್ಷಣೆ ಮಾಡದೇ ದಾರಿಯ ಬದಿಯಲ್ಲಿ, ಹೊಲದ ಅಂಚಿನಲ್ಲಿ ಹಾಕಿರುತ್ತಾರೆ. ಆದರೆ ಈ ಗ್ರಾಮದ ನಿವಾಸಿಯ ಸಂರಕ್ಷಣಾ ಕಾರ್ಯ ಮೆಚ್ಚುವಂತಹದ್ದು. ಇದರಲ್ಲಿ ಸೈನಿಕ ಬಿಲ್ಲು ಬಾಣ ಹಿಡಿದು ಸೈನ್ಯದಲ್ಲಿ ಹುತಾತ್ಮನಾಗಿರುವುದು ಚಿತ್ರಿಸಲಾಗಿದೆ.

—ಡಾ. ಕೆ. ವಿ. ಸಂತೋಷ್, ಹೊಳಲ್ಕೆರೆ

